## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

**ಸ್ಪೆಷಲ್ ಕೇಸ್ ನಂಃ 378/2021**

| | ಚಾಸಾಃ 6 | ಅಸಾಃ 6 |
|---|---|---|
| ಹೆಸರು | ದೇವರಾಜು | |
| ತಂದೆಯ ಹೆಸರು : | ರಮೇಶ | |
| ವಯಸ್ಸು: | 38 ವರ್ಷ | |
| ಕೆಲಸಃ | ಕೂಲಿ | |
| ವಾಸಸ್ಥಳ | ತಿರುಪತಿಹಳ್ಳಿ ಗ್ರಾಮ | |

ದಿನಾಂಕಃ **04/02/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಚಾಸಾ-1 ಮತ್ತು 5 ರವರು ಗೊತ್ತು. ನಿಪಿ-2 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸುಮಾರು ಎರಡುವರೆ ವರ್ಷದ ಹಿಂದೆ ಪೊಲೀಸರು ನಾನು ಜಮೀನಿನ ಹತ್ತಿರ ಹೋಗುವಾಗ ನಿಪಿ-2 ಕ್ಕೆ ಸಹಿ ಪಡೆದಿರುತ್ತಾರೆ. ನಿಪಿ-2 ರಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಸಾಕ್ಷಿ ನಿಪಿ-4 ರ ಪೊಟೋದಲ್ಲಿ ತನ್ನ ಬಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಪೊಟೋದಲ್ಲಿ ಚಾಸಾ-1 ಮತ್ತು 5 ರವರನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-4 ನ್ನು ಯಾವ ವಿಚಾರಕ್ಕೆ ಪೊಟೋ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಎಸ್ ಪಿ ಪಿ ರವರಿಂದಃ

ದಿ. 20.07.2021 ರಂದು ಬೆಳಿಗ್ಗೆ 11.00-11.45 ಗಂಟೆ ಸಮಯದಲ್ಲಿ ಚಾಸಾ-1 ರವರು ಉಳುಮೆ ಮಾಡುತ್ತಿರುವ ಸರ್ವೆ ನಂಬರ್ 1 ರಲ್ಲಿ ನನ್ನನ್ನು ಹಾಗೂ ಚಾಸಾ-5 ರವರನ್ನು ಕರೆಸಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-2 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿದ್ದು ನಿಪಿ-2 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ನ್ನು ಮಹಜರ್ ಸಮಯದಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಈಗ ಓದಿ ಹೇಳಿದಂತೆ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ನಿಪಿ-**2** **4** ಮತ್ತು **7** ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮಗೆ ಯಾರೂ ಒತ್ತಾಯ ಮಾಡಿಲ್ಲ, ಪ್ರಭಾವ ಬೀರಿಲ್ಲ, ನಾನು ಸ್ವತಃ ಸಾಕ್ಷಿ ನುಡಿಯುತ್ತಿದ್ದೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಜಿ ವಕೀಲರಿಂದಃ

ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತಿಳಿಸಿರುತ್ತಾರೆ.

**(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ

ನ್ಯಾಯಾಧೀಶರು, ಹಾಸನ